ಮುಂದಿನ ಅಡ್ಡ ಮೋರಿ ಮೂಲಕ ಹರಿಯಬಿಡಬೇಕಾಗಿರುತ್ತದೆಂದು ವರದಿಯಾಗಿದೆ.

ಆದ್ದರಿಂದ ಸದರಿ ರಸ್ತೆಯ ಪಕ್ಕದ ಕೊರಕಲನ್ನು ತುರ್ತಾಗಿ ದುರಸ್ತಿಗೊಳಿಸಿ, ಈ ರಸ್ತೆಗೆ ಎರಡೂ ಕಡೆ ತಡೆಗೋಡೆ ನಿರ್ಮಿಸಿ ರಸ್ತೆಯನ್ನು ಅಗಲೀಕರಣ ಮಾಡಲು ₹ 35.00 ಲಕ್ಷಗಳು ಅಗತ್ಯವಿರುತ್ತದೆ.

ಪ್ರತಿ ವರ್ಷ ಜಿಲ್ಲಾ ಪಂಚಾಯತಿಗಳಿಗೆ ಗ್ರಾಮೀಣ ರಸ್ತೆ ಮತ್ತು ಸೇತುವೆಗಳ ನಿರ್ವಹಣೆ/ಅಭಿವೃದ್ಧಿಗಾಗಿ ವಿವಿಧ ಯೋಜನೆಗಳಡಿ ಅನುದಾನ ಒದಗಿಸಲಾಗುತ್ತಿದ್ದು, ಹೀಗೆ ಜಿಲ್ಲಾ ಪಂಚಾಯತಿಗೆ ನೀಡುವ ಅನುದಾನದಲ್ಲಿ ತುರ್ತು ಹಾಗೂ ಅಗತ್ಯತೆಗನುಸಾರವಾಗಿ ರಸ್ತೆ ಮತ್ತು ಸೇತುವೆಯ ದುರಸ್ತಿ/ಅಭಿವೃದ್ಧಿ ಕಾಮಗಾರಿಗಳನ್ನು ಜಿಲ್ಲಾ ಪಂಚಾಯತಿ ವತಿಯಿಂದ ಕೈಗೊಳ್ಳಬೇಕಾಗಿರುವುದರಿಂದ ಈ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಸೂಚಿಸಲಾಗಿದೆ. ಮುಂದಿನ ಮಳೆಗಾಲದ ಪ್ರಾರಂಭಕ್ಕೆ ಮೊದಲು ಈ ಕಾಮಗಾರಿಯನ್ನು ಪೂರ್ಣಗೊಳಿಸಲು ಕ್ರಮ ಕೈಗೊಳ್ಳುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ.

ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಶ್ರೀ ಬಿ.ಬಿ. ನಿಂಗಯ್ಯ ಅವರಿಗೆ ವಿವರವಾಗಿರುವ ಉತ್ತರವನ್ನು ಕಳುಹಿಸಿಕೊಟ್ಟಿದ್ದೇನೆ. ಮುಂದಿನ ಮಳೆಗಾಲ ಪ್ರಾರಂಭವಾಗುವುದಕ್ಕಿಂತ ಮುಂಚೆ ಆ ರಸ್ತೆ ರಿಪೇರಿಯಾಗಬೇಕೆನ್ನುವುದು ಮಾನ್ಯ ಸದಸ್ಯರ ಇಚ್ಛೆಯಾಗಿದೆ. ಅದನ್ನು ಪೂರ್ಣಗೊಳಿಸುವುದಕ್ಕೆ ಈಗಾಗಲೇ ಸೂಚನೆ ಕೊಟ್ಟಿದ್ದೇವೆ. ಅದನ್ನು ನಿಗಾವಹಿಸಿ ಪೂರ್ಣಗೊಳಿಸುತ್ತೇವೆ.

ಅಧ್ಯಕ್ಷರು : OK. ಶ್ರೀ ಕೆ.ಆರ್. ರಮೇಶ್ ಕುಮಾರ್ . . . .

3) **ವಿಷಯ : ಖಾಸಗಿ ಅನುದಾನಿತ ಪದವಿಪೂರ್ವ ಕಾಲೇಜುಗಳ ಜೆ.ಓ.ಸಿ. ಕೋರ್ಸ್‌ಗಳಲ್ಲಿ ಕೃಷಿ ವಿಷಯಕ್ಕೆ ಸಂಬಂಧಿಸಿದ ಕೋರ್ಸ್‌ಗಳಲ್ಲಿ ಉಪನ್ಯಾಸಕರಾಗಿ ಸೇವೆ ಸಲ್ಲಿಸಿರುವ ಬಿ.ಎಸ್.ಸಿ.(ಕೃಷಿ) ಹಾಗೂ**

ಬಿ.ಎಸ್.ಸಿ. (ಕೃಷಿ ಮಾರುಕಟ್ಟೆ) ಪದವೀಧರರಿಗೆ ವಿದ್ಯಾರ್ಹತೆಗೆ ತಕ್ಕಂತೆ ಸೂಕ್ತ ಹುದ್ದೆಗಳನ್ನು ನೇಮಕಾತಿ ಮಾಡುವ ಬಗ್ಗೆ.

******

ಶ್ರೀ ಕೆ.ಆರ್. ರಮೇಶ್‌ಕುಮಾರ್ (ಶ್ರೀನಿವಾಸಪುರ): ಖಾಸಗಿ ಅನುದಾನಿತ ಪದವಿಪೂರ್ವ ಕಾಲೇಜುಗಳ ಜೆ.ಓ.ಸಿ. ಕೋರ್ಸ್‌ಗಳಲ್ಲಿ ಕೃಷಿ ವಿಷಯಕ್ಕೆ ಸಂಬಂಧಿಸಿದ ಕೋರ್ಸ್‌ಗಳಲ್ಲಿ ಉಪನ್ಯಾಸಕರಾಗಿ ಸೇವೆ ಸಲ್ಲಿಸಿರುವ ಬಿ.ಎಸ್.ಸಿ.(ಕೃಷಿ) ಹಾಗೂ ಬಿ.ಎಸ್.ಸಿ. (ಕೃಷಿ ಮಾರುಕಟ್ಟೆ) ಪದವೀಧರರಿಗೆ ವಿದ್ಯಾರ್ಹತೆಗೆ ತಕ್ಕಂತೆ ಸೂಕ್ತ ಹುದ್ದೆಗಳನ್ನು ನೇಮಕಾತಿ ಮಾಡುವ ಬಗ್ಗೆ ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರ ಗಮನ ಸೆಳೆಯ ಬಯಸುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ (ಮಾನ್ಯ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು (ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಪರವಾಗಿ): ಮಾನ್ಯ ಅಧ್ಯಕ್ಷರೆ,

- ರಾಜ್ಯದಲ್ಲಿನ ಪದವಿ ಪೂರ್ವ ಶಿಕ್ಷಣದಲ್ಲಿರುವ ಸರ್ಕಾರಿ ಮತ್ತು ಖಾಸಗಿ ಅನುದಾನಿತ ಸಂಸ್ಥೆಗಳ ವೃತ್ತಿ ಆಧಾರಿತ ಕೋರ್ಸ್‌ಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅರೆಕಾಲಿಕ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಗಳನ್ನು ವಿಲೀನಗೊಳಿಸುವ ಸಂಬಂಧ ದಿನಾಂಕ: 06/04/2011 ರ ರಾಜ್ಯ ಪತ್ರ ಅಧಿಸೂಚನೆ ಸಂಖ್ಯೆ :ಸಂವ್ಯಾಶಾಇ ಶಾಸನ–22 ರಲ್ಲಿ ಅಧಿನಿಯಮ ಹೊರಡಿಸಲಾಗಿದೆ.
- ಖಾಸಗಿ ಅನುದಾನಿತ ಜೆ.ಓ.ಸಿ ವಿಲೀನ ಪ್ರಕ್ರಿಯೆಯಲ್ಲಿ ಕೃಷಿ ಸಂಬಂಧಿತ ಹಾಗೂ ತಾಂತ್ರಿಕ ವಿದ್ಯಾರ್ಹತೆ ಪಡೆದಿರುವ (ಬಿ.ಇ ಮತ್ತು ಡಿಪ್ಲೋಮೊ) ಹಲವಾರು ಸಿಬ್ಬಂದಿಗಳಿಗೆ ಖಾಸಗಿ ಸಂಸ್ಥೆಗಳಲ್ಲಿ ಅವರ ವಿದ್ಯಾರ್ಹತೆಗೆ ತಕ್ಕಂತೆ ಹುದ್ದೆಗಳು ಲಭ್ಯವಿಲ್ಲದ ಕಾರಣ, ಸದರಿ ಸಿಬ್ಬಂದಿಯನ್ನು ಅನಿವಾರ್ಯವಾಗಿ ಪ್ರಥಮ ದರ್ಜೆ ಸಹಾಯಕ ಹಾಗೂ ದ್ವಿತೀಯ ದರ್ಜೆ ಸಹಾಯಕರ ಹುದ್ದೆಗಳಲ್ಲಿ

ವಿಲೀನಗೊಳಿಸುವ ಬಗ್ಗೆ ವಿಲೀನ ಸಮಿತಿಯಲ್ಲಿ ನಿರ್ಣಯ ಕೈಗೊಳ್ಳಲಾಗಿದೆ. ದಿನಾಂಕ :21/11/2012 ರಂದು ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ, ಇವರ ಅಧ್ಯಕ್ಷತೆಯಲ್ಲಿ ನಡೆದ ಜೆ.ಓ.ಸಿ ವಿಲೀನ ಪ್ರಕ್ರಿಯೆ ಸಭೆಯಲ್ಲಿ ನಿರ್ಣಯಿಸಿರುವಂತೆ ಯಾವುದೇ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳು ವಿಧಿಸಿರುವ ಶೈಕ್ಷಣಿಕ ವಿದ್ಯಾರ್ಹತೆಯ ಷರತ್ತನ್ನು ಪೂರೈಸದ ಅಭ್ಯರ್ಥಿಗಳನ್ನು ಪ್ರಥಮ ದರ್ಜೆ ಸಹಾಯಕ ಹಾಗೂ ದ್ವಿತೀಯ ದರ್ಜೆ ಸಹಾಯಕರ ಹುದ್ದೆಯಲ್ಲಿ ವಿಲೀನಗೊಳಿಸಲು ಹಾಗೂ ಯಾವುದೇ ಒಂದು ವೃಂದದವರನ್ನು ವಿಲೀನಗೊಳಿಸಲು ನಿಯಮಗಳಲ್ಲಿ ತಿದ್ದುಪಡಿ ತರುವುದು ಸಾಧ್ಯವಿಲ್ಲ, ಆದಕಾರಣ, ವಿಧೇಯಕವನ್ನು ಚಾಚೂತಪ್ಪದೇ ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಯಾವುದೇ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳು ವಿಧಿಸಿರುವ ಮೂಲಭೂತ ನಿಯಮಗಳಿಗೆ (Basic Rules) ಬದ್ದರಾಗಿರಬೇಕು. ಎಲ್ಲಾ ಜೆ.ಓ.ಸಿ ಸಿಬ್ಬಂದಿಗೂ ಜೀವನಾಧಾರ ಕಲ್ಪಿಸುವ ಉದ್ದೇಶದಿಂದ ಇಲಾಖೆಗಳು ನಿಯಮನುಸಾರ ಯಾವ ಹುದ್ದೆ ನೀಡಲು ಸಹಮತಿ ಸೂಚಿಸಿವೆಯೋ ಆ ಹುದ್ದೆಗಳನ್ನು ಸ್ವೀಕಾರ ಮಾಡಲು ತೀರ್ಮಾನಿಸಲಾಯಿತು.

ದಿನಾಂಕ :06/04/2011ರ ಅಧಿನಿಯಮದನ್ವಯ ಸರ್ಕಾರಿ ಪದವಿಪೂರ್ವ ಕಾಲೇಜುಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಜೆ.ಓ.ಸಿ ಸಿಬ್ಬಂದಿಯನ್ನು ಸರ್ಕಾರಿ ಇಲಾಖೆಗಳಲ್ಲಿ ವಿಲೀನಗೊಳಿಸಲು ಹಾಗೂ ಖಾಸಗಿ ಪದವಿಪೂರ್ವ ಕಾಲೇಜುಗಳ ಜೆ.ಓ.ಸಿ ಸಿಬ್ಬಂದಿಗಳನ್ನು ಖಾಸಗಿ ಅನುದಾನಿತ ಪದವಿಪೂರ್ವ ಕಾಲೇಜುಗಳಲ್ಲಿ ಲಭ್ಯವಿರುವ ಹುದ್ದೆಗಳಿಗೆ ವಿಲೀನಗೊಳಿಸಲು ಆಸ್ಪದ ಕಲ್ಪಿಸಲಾಗಿದೆ. ಖಾಸಗಿ ಅನುದಾನಿತ ಪದವಿಪೂರ್ವ ಕಾಲೇಜುಗಳ ಜೆ.ಓ.ಸಿ ಕೋರ್ಸ್‌ಗಳಲ್ಲಿ ಕೃಷಿಗೆ ಸಂಬಂಧಿಸಿದ ಕೋರ್ಸ್‌ಗಳಲ್ಲಿ ಉಪನ್ಯಾಸಕರಾಗಿ ಸೇವೆ ಸಲ್ಲಿಸಿರುವ ಬಿ.ಎಸ್.ಸಿ. (ಕೃಷಿ) ಹಾಗೂ ಬಿ.ಎಸ್.ಸಿ (ಕೃಷಿ ಮಾರುಕಟ್ಟೆ) ಪದವೀಧರರಿಗೆ ಕೃಷಿ ಇಲಾಖೆಯಲ್ಲಿ "ಸಹಾಯಕ ಕೃಷಿ

ಅಧಿಕಾರಿ" ಹಾಗೂ ಕೃಷಿ ಮಾರುಕಟ್ಟೆ ಇಲಾಖೆಯಲ್ಲಿ "ಮಾರುಕಟ್ಟೆ ಮೇಲ್ವಿಚಾರಕ" ಹುದ್ದೆಯಲ್ಲಿ ಖಾಯಂ ಆಗಿ ವಿಲೀನಗೊಳಿಸಲು ವಿದೇಯಕ ಸಂಖ್ಯೆ :ಸಂವ್ಯಾಶಾಇ ಶಾಸನ–22 ರ ಕಂಡಿಕೆ–3(2) ರನ್ವಯ ಅವಕಾಶವಿರುವುದಿಲ್ಲ.

ಈ ಬಗ್ಗೆ ಸಂಬಂಧಿತ ನೌಕರರು ಸರ್ಕಾರಕ್ಕೆ ಮನವಿ ಸಲ್ಲಿಸಿದ್ದು, ಸದರಿಯವರ ಮನವಿಯನ್ನು ಪರಿಶೀಲಿಸಿ, ಕೃಷಿಗೆ ಸಂಬಂಧಿಸಿದ ಕೋರ್ಸ್‌ಗಳಲ್ಲಿ ಉಪನ್ಯಾಸಕರಾಗಿ ಸೇವೆ ಸಲ್ಲಿಸಿರುವ ಬಿ.ಎಸ್.ಸಿ (ಕೃಷಿ) ಹಾಗೂ ಬಿ.ಎಸ್.ಸಿ (ಕೃಷಿ ಮಾರುಕಟ್ಟೆ) ಪದವೀಧರರಿಗೆ ಪಿದ್ಯಾರ್ಹತೆಗೆ ತಕ್ಕಂತೆ ಕೃಷಿ ಇಲಾಖೆ ಹಾಗೂ ಕೃಷಿ ಮಾರುಕಟ್ಟೆ ಇಲಾಖೆಯಲ್ಲಿ ವಿಲೀನಗೊಳಿಸುವ ಬಗ್ಗೆ ವಿಧೇಯಕ ದಿನಾಂಕ :06/04/2011ರ ರಾಜ್ಯ ಪತ್ರ ಅಧಿಸೂಚನೆ ಸಂಖ್ಯೆ :ಸಂವ್ಯಾಶಾಇ ಶಾಸನ–22 ರ ಅಧಿನಿಯಮಕ್ಕೆ ತಿದ್ದುಪಡಿ ಮಾಡುವ ಬಗ್ಗೆ ಕಾನೂನು ಇಲಾಖೆ ಹಾಗೂ ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಇಲಾಖೆಯ ಅಭಿಪ್ರಾಯ ಪಡೆಯಲಾಗುತ್ತಿದೆ.

ಪ್ರಸ್ತುತ ಕೃಷಿ ವಿದ್ಯಾರ್ಹತೆ ಹೊಂದಿದ ಜೆ.ಓ.ಸಿ ಸಿಬ್ಬಂದಿಗಳನ್ನು ಕಾಲೇಜು ಶಿಕ್ಷಣ ಇಲಾಖೆಯ 366 ಬೋಧಕೇತರ ಹುದ್ದೆಗಳ ಪಟ್ಟಿಯಲ್ಲಿ ಪ್ರಥಮ ದರ್ಜೆ ಸಹಾಯಕರ ಹುದ್ದೆಯಲ್ಲಿ ವಿಲೀನಗೊಳಿಸಲು ಈಗಾಗಲೇ ಪಟ್ಟಿಯನ್ನು ಕೌನ್ಸಿಲಿಂಗ್ ಪ್ರಕ್ರಿಯೆಗಾಗಿ ಕಾಲೇಜು ಶಿಕ್ಷಣ ಇಲಾಖೆಗೆ ಸಲ್ಲಿಸಲಾಗಿದೆ ಹಾಗೂ ತಾಂತ್ರಿಕ ವಿದ್ಯಾರ್ಹತೆ ಹೊಂದಿರುವ ಸಿಬ್ಬಂದಿ ಹೆಸರುಗಳನ್ನು ಕೂಡ ಕಾಲೇಜು ಶಿಕ್ಷಣ ಇಲಾಖೆಯ ಪಟ್ಟಿಯಲ್ಲಿ ಪ್ರಥಮ ದರ್ಜೆ ಸಹಾಯಕ ಹುದ್ದೆಗೆ ವಿಲೀನಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಮಾನ್ಯ ಅಧ್ಯಕ್ಷರೆ, ಈಗಾಗಲೇ ಉತ್ತರಗಳನ್ನು ಒದಗಿಸಲಾಗಿದೆ. ಮಾನ್ಯ ಸಚಿವರೂ ಸಹ ಸದನದಲ್ಲಿಲ್ಲ. ಏನಾದರೂ ಉಪ ಪ್ರಶ್ನೆ ಇದ್ದರೆ ಅದಕ್ಕೆ ಉತ್ತರವನ್ನು ಕೂಡುತ್ತೇನೆ.

ಶ್ರೀ ಆರ್.ಕೆ. ರಮೇಶ್ ಕುಮಾರ್: ಮಾನ್ಯ ಅಧ್ಯಕ್ಷರೆ, ಉಪ ಪ್ರಶ್ನೆ ಏನೂ ಇಲ್ಲ. FDA, SDA ಮಾಡುತ್ತೇವೆಂದು ನೀವು ಹೇಳಿದ್ದಿರಿ. Professional Course.. marketing ನಲ್ಲಿ ಮತ್ತು agricultural ನಲ್ಲಿ degree ತೆಗೆದುಕೊಂಡಿದ್ದಾರೆ. ಅವರನ್ನು ಮಾರುಕಟ್ಟೆ ಮೇಲ್ವಿಚಾರಕರು ಮತ್ತು ಸಹಾಯಕ ಕೃಷಿ ಅಧಿಕಾರಿ ಎಂದು ಮಾಡಿ. ನಿಮಗೆ ನಷ್ಟವಾಗುವುದಿಲ್ಲ. Pay ನಲ್ಲಿ ದೊಡ್ಡ difference ಬರುವುದಿಲ್ಲ. ಸ್ವಲ್ಪ ಹೃದಯ ವೈಶಾಲ್ಯತೆ ಬೇಕಾಗುತ್ತದೆ. ಮಾಡುವುದಕ್ಕೆ ಅವರಿಗೆ ಹೇಳಿ ಒಪ್ಪಿಸಿ, ಅವರು ಒಪ್ಪಿಕೊಂಡರೆ ಸಾಕು. Problem is solved.

ಶ್ರೀ ಟಿ.ಬಿ. ಜಯಚಂದ್ರ (ಕಾನೂನು ಮತ್ತು ಸಂಸದೀಯ ವ್ಯವಹಾರಗಳು, ಪಶುಸಂಗೋಪನೆ ಸಚಿವರು) : ಮಾನ್ಯ ಅಧ್ಯಕ್ಷರೆ, ಲಿಖಿತವಾಗಿ ಕೊಟ್ಟಿರುವಂಥ ಉತ್ತರದಲ್ಲಿ ಶಾಸನ 22 ಅಧಿನಿಯಮ ಕ್ಕೆ ತಿದ್ದುಪಡಿ ಮಾಡುವ ಕಾನೂನು ಇಲಾಖೆ, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆಯ ಅಭಿಪ್ರಾಯವನ್ನು ಪಡೆಯಲಾಗುತ್ತದೆ ಎಂದು ಹೇಳಿದ್ದಾರೆ. ಅದು ನಮ್ಮ ಇಲಾಖೆಯ ವ್ಯಾಪ್ತಿಗೆ ಬರುತ್ತದೆ. ಖಂಡಿತವಾಗಿ ಅದನ್ನು ತರಿಸಿ, ಆದಷ್ಟು ಬೇಗನೆ ಪರಿಶೀಲನೆ ಮಾಡುತ್ತೇನೆ.

4) ವಿಷಯ: ಹಾಲಕ್ಕಿಗೌಡ ಮತ್ತು ಕರಿಬ್ಯಾಲುಗೌಡ, ಕುಣಬಿ ಮತ್ತು ದನಗರಗೌಳಿ ಸಮುದಾಯಗಳನ್ನು ಪರಿಶಿಷ್ಟ ಪಂಗಡದ ಪಟ್ಟಿಯಲ್ಲಿ ಸೇರಿಸುವ ಬಗ್ಗೆ.

****

ಶ್ರೀ ಅರಬೈಲ್ ಶಿವರಾಮ್ ಹೆಬ್ಬಾರ್ (ಯಲ್ಲಾಪುರ): ಮಾನ್ಯ ಅಧ್ಯಕ್ಷರೆ, ಉತ್ತರ ಕನ್ನಡ ಜಿಲ್ಲೆಯ ಹಾಲಕ್ಕಿಗೌಡ ಮತ್ತು ಕರಿಬ್ಯಾಲುಗೌಡ, ಕುಣಬಿ ಮತ್ತು ದನಗರಗೌಳಿ ಸಮುದಾಯಗಳನ್ನು ಪರಿಶಿಷ್ಟ ಪಂಗಡದ ಪಟ್ಟಿಯಲ್ಲಿ ಸೇರಿಸುವ